ಶ್ರೀ ಸಿ. ಎಚ್. ಲಿಂಗದೇವರು.—1952-53 ರಲ್ಲಿ ಆರ್ಥ ಕಂದಾಯ ರಿವಿಷ್ಡ ಮಾಡಿರುವುದರ ಜೊತೆಗೆ ಆರ್ಥ ಸಪ್ಲೆಂಡ್ ಮಾಡಬೇಕೆಂದು ಸಹ ಆರ್ಡರಾಗಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಸಿ. ಎಚ್. ಲಿಂಗದೇವರು.—ಹಾಗಾದರೆ 1952-53 ರರಲ್ಲಿ ನಿರ್ಬಂಧವಾಗಿ ಕಂದಾಯ ವಸೂಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಈಗ 1953-54 ರಲ್ಲೂ ವಸೂಲುಮಾಡುತ್ತಿರುವುದೂ, ಸರ್ಕಾರಿ ಆರ್ಡರನ್ನು ಎಫೆಕ್ಟಿಗೆ ಕೊಟ್ಟಿಲ್ಲದಿರುವುದೂ ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—1953-54 ರಲ್ಲಿ ಬಾಕಿ ಇರುವುದನ್ನು ವಸೂಲು ಮಾಡುತ್ತಾರೆ.

ಶ್ರೀ ಸಿ. ಎಚ್. ಲಿಂಗದೇವರು.—ಸರ್ಕಾರಿ ಆರ್ಡರನ್ನು ಜಾರಿಗೆ ಕೊಡದೆ ರೆವಿಷ್ಡ ಆಗಿರುವುದನ್ನು 1953-54 ರಲ್ಲಿ ವಸೂಲು ಮಾಡುತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ರೆವಿಷ್ಡ ಆಗಿರುವುದನ್ನು ವಸೂಲು ಮಾಡುವುದು ಗೊತ್ತಾಗಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಯಾವಾಗ ಆರ್ಡರಾಗಿರುವುದನ್ನು ಎಫೆಕ್ಟಿಗೆ ಕೊಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಆರ್ಡರಾದ ತಕ್ಷಣ.

ಶ್ರೀ ಸಿ. ಎಚ್. ಲಿಂಗದೇವರು.—ತಮ್ಮ ಆರ್ಡರು ಜಾರಿಗೆ ಬಂದಿಲ್ಲ. ಅದನ್ನು ವಿಚಾರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಮಾಡುತ್ತೇವೆ.

ಶ್ರೀ ಸಿ. ಎಚ್. ಲಿಂಗದೇವರು. — ಹಿಂದನಕೆರೆ ಹೋಬಳಿ ರಿಕಾರ್ಡಿನಲ್ಲಿ ಬಿಟ್ಟುಹೋಗಿರುವುದಕ್ಕೆ ರೆವಿಷ್ಡ ಆರ್ಡರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಆರ್ಡರು ಬೇಕಾದರೆ ಮಾಡಬಹುದು.

Restoration work of Yelagalakere, Chintamani Taluk.

Q.—1036. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) when the restoration work of Yelagalakere of Bathalahalli Village, Murugamalla Hobli, Chintamani Taluk was sanctioned ;

(*b*) (i) the amount sanctioned for the said work ;

(ii) the name of the contractor entrusted with this work ;

(*c*) if the work has been so entrusted, the stage in which it is now and the reason for not yet completing it ;

(*d*) (i) whether any petitions had been received from the ryots in this behalf ;

(ii) if so, the number of petitions received and the date of their receipt ?

A.—Sri Kadidal MANJAPPA (Minister for Revenue and Public Works).—

(*a*) The original estimate was sanctioned in the year 1944, and a revised estimate in 1952.

(*b*) (i) Original Estimate : Rs. 4,400.
Revised Estimate : Rs. 9,630.

(ii) Sri G. Erappa was the first Contractor and subsequently Sri B. Narayana Reddy has been entrusted with the work.

(*c*) The work is nearing completion.

(*d*) (i) Yes.

(ii) One petition on 25th October 1948.

ಶ್ರೀ ಜೆ. ನಾರಾಯಣಪ್ಪ.—ಮೊದಲನೆಯ ಕಂಟ್ರಾಕ್ಟರಾದ ಈಶ್ವರಪ್ಪನವರು ಕೆಲಸ ಬಿಟ್ಟರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ದರ ಗಿಟ್ಟುವುದಿಲ್ಲವೆಂದು ಬಿಟ್ಟರು ಎಂಬ ವರ್ತಮಾನವಿದೆ.

ಶ್ರೀ ಜೆ. ನಾರಾಯಣಪ್ಪ.—ಮೊದಲನೆಯ ಕಂಟ್ರಾಕ್ಟರು ಮಾಡಿರುವ ಕೆಲಸಕ್ಕೆ ಹಣ ಪಾವತಿ ಮಾಡಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಜೆ. ನಾರಾಯಣಪ್ಪ.—ಎರಡನೆಯ ಕಂಟ್ರಾಕ್ಟರ್ ಬಿ. ನಾರಾಯಣರೆಡ್ಡಿ ಕೆಲಸಮಾಡುತ್ತಿರುವರೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತಿದ್ದಾರೆ ; ಕೆಲಸ ಮುಗಿಯುವುದರಲ್ಲಿದೆ.

ಶ್ರೀ ಜೆ. ನಾರಾಯಣಪ್ಪ.—ಎರಡು ವರ್ಷಗಳಿಂದ ಒಂದು ಸಲಿಕೆ ಮಣ್ಣನ್ನು ಸಹ ಹಾಕಿಲ್ಲ. ಅದನ್ನು ನೋಡಿ ನಾನು ಕೇಳುತ್ತಿರುವುದು.

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಬಂದಿರುವ ವರದಿ ಪ್ರಕಾರ ಕೆಲಸ ಮುಗಿಯುತ್ತಾ ಬಂದಿದೆಯೆಂದು ಗೊತ್ತಾಗಿದೆ, ಪರಿಶೀಲನುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—ಜಾಗ್ರತೆ ಈ ಕೆಲಸ ಮುಗಿಯುವಂತೆ ಏರ್ಪಾಡು ಮಾಡಬೇಕು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—1944 ರಲ್ಲಿ ಮಂಜೂರಾಗಿರುವ ಕೆಲಸವನ್ನು 1953ರ ವರೆಗೂ ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಂಟ್ರಾಕ್ಟರು ಮಧ್ಯೆ ಬಿಟ್ಟುಬಿಟ್ಟರು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹಾಗೆ ಬಿಟ್ಟರೆ ಡಿಪಾಜಿಟ್‌ವಗ್ಗೆರೆ ಇರುವುದನ್ನು ನೋಡಿ ಸರಿಯಾದ ಕ್ರಮ ಕೈಗೊಂಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಮೇಲೆ ನೂಕ್ಕ ಕ್ರಮ ಕೈಗೊಂಡಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ 9 ವರ್ಷಗಳಿಂದ ಅಲ್ಲ ಬೆಳೆಯಿಲ್ಲವೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಷ್ಟು ವರ್ಷ ಸರ್ಕಾರ ತನ್ನ ಕರ್ತವ್ಯ ಸರಿಯಾಗಿಮಾಡದೆ ನಿಧಾನ ಮಾಡ್ದರಿಂದ ರೈತರಿಗಾಗಿರುವ ನಷ್ಟಕ್ಕೆ ಪರಿಹಾರ ಕೊಡಲು ಯೋಚನೆಮಾಡುತ್ತೀರಾ ?

Sri Kadidal MANJAPPA.—That does not arise.

Amount spent in each District out of grant allotted for Five-Years' scheme.

Q.—739. **Sri H. T. PUTTAPPA** (Hosakote-Anekal—Scheduled Castes).

Will the Government be pleased to state :—

the amount that is being spent in each district, out of the amount allotted for the Five-Years' scheme ?

A.—**Sri K. HANUMANTHAIYA** (Chief Minister). –

Districtwar allotments of funds have not been made in the Five-Year Plan. The schemes formulated under Five-Year Plan and the expenditure on them are for the entire State.

ಶ್ರೀ ಎಚ್. ಟಿ. ಪುಟ್ಟಪ್ಪ.—ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಾಗಿನಿಂದ ಹೊನಕೋಟೆ ಮತ್ತು ಆನೆಕಲ್ಲು ತಾಲ್ಲೂಕುಗಳಲ್ಲಿ ಯಾವ ಕೆಲಸ ಗಳನ್ನು ಮಾಡುತ್ತಿದೆ ?

*ಶ್ರೀ ಕೆ. ಹನುಮಂತಯ್ಯ.—ಈ ಯೋಜನೆಯನ್ನು ತಾಲ್ಲೂಕುವಾರಾಗಿ ಮಾಡಿಲ್ಲ.

Grants under Amelioration of Depressed Classes.

Q.—835. **Sri G. PUTTASWAMY** (Chikmagalur-Mudigere—Scheduled Castes).—

Will the Government be pleased to state :—

(*a*) what is the Districtwar distribution of grants under Amelioration of Depressed Classes during the year 1953-54 ;

(*b*) what is the actual districtwar expenditure under the above head ;

(*c*) what is the number of applications from people belonging to Depressed Classes received talukwar, for the construction of dwelling houses in the Chikmagalur District ; how many of them have been disposed of and how many of them are yet pending and the reason therefor ;

(*d*) whether any Deputy Commissioners of the Districts have requested for additional grants ;

(*e*) what is the action taken thereon ?

A.—**Sri K. HANUMANTHAIYA** (Chief Minister).—

(*a*) and (*b*).

1	Hassan	1,42,000	89,212
2	Tumkur	1,50,000	1,33,236
3	Chitaldrug	1,67,500	1,15,813
4	Mysore	1,65,000	98,699
5	Bangalore	2,06,600	1,50,918
6	Mandya	1,26,000	54,469
7	Kolar	1,68,700	1,47,042
8	Bellary	35,000	1,944
9	Chikmagalur	1,20,000	1,04,199
10	Shimoga	1,30,000	(Information) not received.

(*c*) (1) 812 (Talukwar information is not readily available).

(2) 482.

(3) 330.

(*d*) Yes.

(*e*) There are no amounts remaining to be distributed to the Districts. Funds will be provided early next month out of the grant to be sanctioned for 1954-55.

ಶ್ರೀ ಜಿ. ಪುಟ್ಟಸ್ವಾಮಿ.—ಈಗ 1953-54 ರಲ್ಲಿ ಮಂಜೂರು ಮಾಡಿರುವ 19 ಲಕ್ಷ ರೂಪಾಯಿ ಅಮಿಲೆ ಯೊರೇಷನ್ ಗ್ರಾಂಟು ಪೈಕಿ 14,10,800 ರೂಪಾಯಿ ಮಾತ್ರ ಹಂಚಿದೆಯೆಂದು ಹೇಳಿದೆ. ಉಳಿದ ಹಣವೇ ನಾಯಿತು ?

*ಶ್ರೀ ಕೆ. ಹನುಮಂತಯ್ಯ.—ಉಳಿತಾಯವಾಗಿರ ಬೇಕು. ಇನ್ನೂ ಖರ್ಚಾಗುತ್ತದೆ. ಈಗ ಕೊಟ್ಟಿರುವ ಅಂಕಿಗಳು ಫೆಬ್ರವರಿವರೆಗೆ ಇರಬೇಕು.

ಶ್ರೀ ಜಿ. ಪುಟ್ಟಸ್ವಾಮಿ.—19 ಲಕ್ಷದ ಅಲಾಟ್ ಮೆಂಟಿನಲ್ಲಿ 14 ಲಕ್ಷ ಮಾತ್ರ ಹಂಚಿದೆ. ಉಳಿದ ಹಣ ವನ್ನೇಕೆ ಹಂಚಿಲ್ಲ ?

ಶ್ರೀ ಕೆ. ಹನುಮಂತಯ್ಯ.—ಬೇರೆ ಬೇರೆ ಸ್ಕೀಮು ಗಳಿವೆ. ಅವಕ್ಕೆ ಖರ್ಚಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ಸ್ಕೀಮುಗಳು ಯಾವುವು ?

ಶ್ರೀ ಕೆ. ಹನುಮಂತಯ್ಯ.—ಅದನ್ನು ಎರಡು ಮೂರು ಸಾರಿ ಹೇಳಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ.—14,10,800 ರೂಪಾಯಿ ಗಳ ಪೈಕಿ 8,95,532 ರೂಪಾಯಿಗಳು ಮಾತ್ರ ಖರ್ಚಾಗಿರುವುದಕ್ಕೆ ತಪಶೀಲು ಕೊಟ್ಟಿದೆ. ಶಿವ ಮೊಗ್ಗ ಜಿಲ್ಲೆಯಲ್ಲಿ ಖರ್ಚಾಗಿರುವುದನ್ನು ಕೊಟ್ಟಿಲ್ಲ. ಏಕೆ ? 10,25,537 ರೂಪಾಯಿ ಹಂಚಿದ್ದರ ಪೈಕಿ ಉಳಿತಾಯವಾಗಿರುವುದಕ್ಕೆ ಕಾರಣವೇನು ?

*Asterisk indicates that the remarks or speeches have not been revised by the Member concerned.